ದಿಃ 16.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಕೆ. ವಕೀಲರಿಂದ ,**

7. ನನ್ನ ತಾತ ನಾಗೇಂದ್ರಪ್ಪ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ತಾತ ನಾಗತಿಬೆಳಗಲು ಗ್ರಾಮದ ಪಟೇಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಸದರಿ ಗ್ರಾಮದ ಮುಖಂಡರಾಗಿ ನನ್ನ ತಾತ ಪಂಚಾಯತಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂದರೆ ಸರಿ. ಸುತ್ತ – ಮುತ್ತಲ ಗ್ರಾಮಗಳಲ್ಲಿ ಸಹ ನನ್ನ ತಾತ ಪಂಚಾಯತಿ ಮಾಡುತ್ತಿದ್ದರು ಎಂದರೆ ಸರಿ. ಸರ್ಕಾರಿ ಕಛೇರಿಗಳ ಬಗ್ಗೆ ಅವರಿಗೆ ತಿಳಿದಿತ್ತು ಎಂದರೆ ಸರಿ. ಆ ಸಂಬಂಧ ನನ್ನ ತಾತ ಗ್ರಾಮಸ್ಥರಿಗೆ ತಿಳುವಳಿಕೆ ನೀಡುತ್ತಿದ್ದರು ಎಂದರೆ ಸರಿ. ನನ್ನ ತಾತ ಮೊಬೈಲ್ ಹೊಂದಿದ್ದರು ಎಂದರೆ ಸರಿ. 9901005631 ನನ್ನ ತಾತನ ಮೊಬೈಲ್ ಸಂಖ್ಯೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ದೂರಿನ ಸ್ವೀಕೃತಿ ಪತ್ರದಲ್ಲಿನ ತನ್ನ ತಾತನ ಸಹಿಯನ್ನು ನೋಡಿ ಗುರುತಿಸಲು ಸೂಚಿಸಲಾಗಿ ಸಾಕ್ಷಿ ಸದರಿ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ಅಡ್ಡಲಾಗಿ ನಿಡಿ - 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೋಲೀಸ್ ದೂರಿನ ನಕಲನ್ನು ತೋರಿಸಿ ಅದರಲ್ಲಿನ ತನ್ನ ತಾತನ ಸಹಿಯನ್ನು ಗುರುತಿಸಲು ಸೂಚಿಸಲಾಗಿ ಸಾಕ್ಷಿ ಸದರಿ ಸಹಿಯನ್ನು ನೋಡಿ ತನ್ನ ತಾತನ ಸಹಿ ಎಂದು ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ಅಡ್ಡಲಾಗಿ ನಿಡಿ - 2 ಎಂದು ಗುರುತಿಸಲಾಯಿತು. ನಾನು ಹಾಗೂ ನನ್ನ ತಮ್ಮ, ನನ್ನ ತಾತನಿಗೆ ದಿಃ 11-01-2023 ರಂದು ಹಲ್ಲೆ ಮಾಡಿದ್ದು ಆ ಸಂಬಂಧ ಅವರು ನಮ್ಮ ವಿರುದ್ಧ ಉಪವಿಭಾಗಾಧಿಕಾರಿರವರಲ್ಲಿ ನಿಡಿ - 1 ರಂತೆ ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದೂರಿನ ಮೇರೆಗೆ ಉಪವಿಭಾಗಾಧಿಕಾರಿರವರು ನನ್ನ ತಾತನಿಗೆ ರಕ್ಷಣೆ ನೀಡುವಂತೆ ಜಿಲ್ಲಾ ಪೋಲೀಸ್

ವರಿಷ್ಠರಿಗೆ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವುಗಳು ನಮ್ಮ ತಾಯಿ ಹಾಗೂ ನನ್ನ ತಾತನಿಗೆ ಹಲ್ಲೆ ಮಾಡಿ ಕಿರುಕುಳ ನೀಡುತ್ತಿದ್ದೆವು ಎಂದರೆ ಸರಿಯಲ್ಲ. ಆ ಸಂಬಂಧ ನನ್ನ ತಾಯಿ ಹಾಗೂ ನನ್ನ ತಾತ ನಮ್ಮ ವಿರುದ್ಧ ಪೋಲೀಸರಲ್ಲಿ ಹಾಗೂ ಉಪವಿಭಾಗಾಧಿಕಾರಿಗಳಲ್ಲಿ ಹಲವು ದೂರುಗಳನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

8. ದಿಃ 13-09-2012 ರಂದು ನನ್ನ ತಂದೆ ಹಾಗೂ ನನ್ನ ತಾತ ಒಂದು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದು ಸದರಿ ಪತ್ರದ ನಕಲನ್ನು ತೋರಿಸಿ ಗುರುತಿಸಲು ಸೂಚಿಸಲಾಗಿ ಸಾಕ್ಷಿ ಸದರಿ ಪತ್ರವನ್ನು ನೋಡಿ ಸದರಿ ಪತ್ರವನ್ನು ಸ್ವತ್ತುಗಳ ಅಭಿವೃದ್ಧಿ ಪಡಿಸುವ ಸಲುವಾಗಿ ಸಾಲ ಪಡೆಯುವ ಉದ್ದೇಶಕ್ಕಾಗಿ ಮಾತ್ರ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರವನ್ನು ಅಡ್ಡಲಾಗಿ ನಿಡಿ - 3 ಎಂದು ಗುರುತಿಸಲಾಯಿತು. ನಿಡಿ - 3 ರಂತೆ ನನ್ನ ತಂದೆ ಪಾಲಿಗೆ ಬಂದ ಸ್ವತ್ತುಗಳನ್ನು ನಾನು ಹಾಗೂ ನನ್ನ ಸೋದರ ಸೋದರಿಯರು ದಿಃ 21-03-2022 ರಂದು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಸಾಕ್ಷಿಗೆ ಸದರಿ ವಿಭಾಗ ಪತ್ರದ ನಕಲನ್ನು ತೋರಿಸಿ ಸೂಚಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ - 4 ಎಂದು ಗುರುತಿಸಲಾಯಿತು.

9. ಸರ್ವೆ ನಂಬರ್ 21 ಪಟೇಲ್ ಉಂಬ್ಳಿ ಜಮೀನು ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿ ನಾನು ತಿಳಿದುಕೊಂಡಿರುತ್ತೇನೆ. ನಿಪಿ - 18 ರಲ್ಲಿ ನಮೂದಿಸಿರುವ ಸರ್ವೆ ನಂಬರ್ 21 ರ 7 ಎಕರೆ 35 ಗುಂಟೆ ಹಾಗೂ ಸರ್ವೆ ನಂಬರ್ 72 ರ 6 ಎಕರೆ 36 ಗುಂಟೆ ಜಮೀನು ಪಟೇಲ್ ಉಂಬ್ಳಿ ಜಮೀನು ಎಂದರೆ ಸರಿ. ಸದರಿ ಜಮೀನುಗಳು ಸದರಿ ಪಟೇಲ್ ಹಕ್ಕು ಹೊಂದಿದ್ದವರ ಕುಟುಂಬಗಳಿಗೆ ಮರು ಮಂಜೂರು ಆಗಿರುತ್ತದೆ ಎಂದರೆ ಸರಿ.

ಸದರಿ ಸರ್ವೆ ನಂಬರ್ 21 ರ 7 ಎಕರೆ 35 ಗುಂಟೆ ಜಮೀನು ಸಂಪೂರ್ಣ ನನ್ನ ತಾತನ ಹೆಸರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿ. ಅದರಂತೆ ಸರ್ವೆ ನಂಬರ್ 72 ರ ಪೈಕಿ 2 ಎಕರೆ 12 ಗುಂಟೆ ಜಮೀನು ಮಾತ್ರ ನನ್ನ ತಾತನ ಹೆಸರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿ.

10. ನಿಡಿ - 3 ವಿಭಾಗ ಪತ್ರದ ಅಡಿ ಸರ್ವೆ ನಂಬರ್ 21 ರಲ್ಲಿ ನನ್ನ ತಂದೆಯ ಪಾಲಿಗೆ ಸಂಪೂರ್ಣ ಜಮೀನು ಬಂದಿತ್ತು. ನಿಡಿ - 4 ವಿಭಾಗ ಪತ್ರದ ಅಡಿ ನಮ್ಮಗಳಿಗೆ ತಲಾ 1 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ.

11. ಇನಾಮ್ ಸ್ವತ್ತುಗಳ ಸಂಬಂಧ ದಾವೆಯಲ್ಲಿ ಏನು ಹೇಳಿ ಬರೆಸಿರುತ್ತೇನೆ ನನಗೆ ತಿಳಿದಿರುತ್ತದೆ. ನಿಡಿ - 4 ರ ಅಡಿ ನನ್ನ ಪಾಲಿಗೆ ಬಂದ ಸರ್ವೆ ನಂಬರ್ 21 ರ ಜಮೀನಿನ ಪೈಕಿ 37 ಗುಂಟೆ ಜಮೀನನ್ನು ನಾನು ಹಾಗೂ ನನ್ನ ಹೆಂಡತಿ ಚಂದ್ರಮ್ಮ ಕೋಂ ಚಂದ್ರಪ್ಪ ಎಂಬುವರಿಗೆ ಮಾರಾಟ ಮಾಡಿರುತ್ತೇವೆ ಎಂದು ಸದರಿ ಕ್ರಯ ಪತ್ರದ ನಕಲನ್ನು ತೋರಿಸಿ ಸೂಚಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ - 5 ಎಂದು ಗುರುತಿಸಲಾಯಿತು. ಅದರಂತೆ 2 ನೇ ವಾದಿ ತನ್ನ ಪಾಲಿಗೆ ಬಂದ ಜಮೀನನ್ನು ನಾಗರಾಜು ಎಂಬುವರಿಗೆ ದಿಃ 3-11-2022 ರಂದು ಮಾರಾಟ ಮಾಡಿರುತ್ತಾರೆ ಎಂದು ಸದರಿ ಕ್ರಯ ಪತ್ರದ ನಕಲನ್ನು ತೋರಿಸಿ ಸೂಚಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಅಡ್ಡಲಾಗಿ ನಿಡಿ - 6 ಎಂದು ಗುರುತಿಸಲಾಯಿತು.

12. ನಿಡಿ - 3 ಹಾಗೂ 4 ವಿಭಾಗ ಪತ್ರಗಳಲ್ಲಿ ನಮ್ಮ ಕುಟುಂಬದ ನಿವೇಶನ ಹಾಗೂ ಮನೆಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದ ಅಡಿ ನನ್ನ ಅಜ್ಜನಿಗೆ 2 ಮನೆ ಹಾಗೂ ಒಂದು ನಿವೇಶನ ಹೋಗಿತ್ತು. ಸದರಿ ಸ್ವತ್ತುಗಳ ಅಳತೆ ನನಗೆ ತಿಳಿದಿಲ್ಲ.

ಸದರಿ ವಿಭಾಗದಲ್ಲಿ ನನ್ನ ತಂದೆ ಪಾಲಿಗೆ ಯಾವುದೇ ಮನೆ ಅಥವಾ ನಿವೇಶನವನ್ನು ನೀಡಿಲ್ಲ. ನಿಡಿ - 4 ವಿಭಾಗ ಪತ್ರದ ಅಡಿ ನಾವುಗಳು ಯಾವುದೇ ಮನೆ ಅಥವಾ ನಿವೇಶನವನ್ನು ಹಂಚಿಕೆ ಮಾಡಿಕೊಂಡಿಲ್ಲ. ನಮ್ಮ ಕುಟುಂಬದ ವ್ಯವಸ್ಥೆಯಂತೆ 2 ಮನೆಗಳನ್ನು ನನ್ನ ತಮ್ಮನ ಪಾಲಿಗೆ ನೀಡಿದ್ದು, ನನಗೆ ಒಂದು ನಿವೇಶನವನ್ನು ನೀಡಿರುತ್ತಾರೆ. ಸದರಿ ನಿವೇಶನ 29 X 150 ಅಡಿ ಇರುತ್ತದೆ. ಸದರಿ ನಿವೇಶನದ ಖಾತೆ ನನ್ನ ಹೆಸರಿಗೆ ಬದಲಾವಣೆ ಆಗಿರಲಿಲ್ಲ ಎಂದರೆ ಸರಿ. ಅದು ನನ್ನ ತಾತನ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ಸ್ವತ್ತನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ನನ್ನ ತಾತ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯದ ವ್ಯವಹಾರವನ್ನು ನನ್ನ ತಾತನೇ ಮಾಡಿರುತ್ತಾರೆ. ಸದರಿ ಸ್ವತ್ತಿನ ಸಂಬಂಧ ನನ್ನ ತಾತ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ. ವ್ಯವಹಾರ ಆದ ಎಷ್ಟು ದಿವಸಗಳ ನಂತರ ಸದರಿ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಸದರಿ ಸ್ವತ್ತಿನ ಸಂಬಂಧ ನನ್ನ ತಾತ, ನಾನು ಹಾಗೂ ನನ್ನ ಹೆಂಡತಿ ಕ್ರಯ ಪತ್ರ ಬರೆದುಕೊಟ್ಟಿರುತ್ತೇವೆ ಎಂದು ಸಾಕ್ಷಿಗೆ ಒಂದು ಕ್ರಯ ಪತ್ರದ ನಕಲನ್ನು ತೋರಿಸಿ ಸೂಚಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿ ಸದರಿ ಸ್ವತ್ತನ್ನು ನನಗೆ ನೀಡಬೇಕು ಎಂದು ಇದ್ದ ಕಾರಣ ಸದರಿ ಕ್ರಯ ಪತ್ರಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದು ನುಡಿದಿದ್ದು ಆ ಮೇರೆಗೆ ಸದರಿ ಪತ್ರವನ್ನು ಅಡ್ಡಲಾಗಿ ನಿಡಿ - 7 ಎಂದು ಗುರುತಿಸಲಾಯಿತು. ನಿಡಿ - 7 ರಲ್ಲಿ ಸದರಿ ಸ್ವತ್ತನ್ನು ನನ್ನ ಪಾಲಿಗೆ ನೀಡಿದ್ದಾಗಿ ನಮೂದು ಇರುತ್ತದೆ ಎಂದರೆ ಸಾಕ್ಷಿ ಸದರಿ ಸ್ವತ್ತು ನನ್ನ ತಾತನ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ನಾನು ನನ್ನ ಹಣದ ಅವಶ್ಯಕತೆಗಾಗಿ ಮಾರಾಟ ಮಾಡಿದ್ದು ಸದರಿ ಹಣವನ್ನು ನಾನೇ ಪಡೆದಿರುತ್ತೇನೆ ಎಂದರೆ ಸಾಕ್ಷಿ ನನ್ನ ತಾತ ತಳ್ಳಿಕಟ್ಟೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಮಾಡಿದ ಸಾಲವನ್ನು ತೀರುವಳಿ ಮಾಡಲು ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕ್ರಯದ ಹಣದಿಂದ ನನ್ನ ತಾತ ಸದರಿ ಸಂಘದ ಸಾಲವನ್ನು ತೀರುವಳಿ ಮಾಡಿರುತ್ತಾರೆ. ಸದರಿ ವ್ಯವಹಾರ ಮಾಡುವ ಬುದ್ಧಿ

ಹಾಗೂ ಸಾಮರ್ಥ್ಯ ಆ ಸಮಯ ನನ್ನ ತಾತನಿಗೆ ಇತ್ತೇ ಎಂದರೆ ಸಾಕ್ಷಿ ಆ ಸಮಯ ನನ್ನ ತಾತನಿಗೆ ಅನಾರೋಗ್ಯ ಇದ್ದ ಕಾರಣ ಅವರು ಸ್ವತಂತ್ರವಾಗಿ ವ್ಯವಹಾರ ಮಾಡಲು ಸಾಧ್ಯವಿರಲಿಲ್ಲ ಆ ಕಾರಣ ನಾನು ಕ್ರಯ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕ್ರಯದ ಹಣದಿಂದ ಸದರಿ ಸಂಘದ ಸಾಲವನ್ನು ತೀರುವಳಿ ಮಾಡಿರುತ್ತೇನೆ. ಆ ಸಮಯ ಸದರಿ ಸಂಘದಲ್ಲಿ ರೂ. 1,22,000/- ಸಾಲ ಇತ್ತು. ಸದರಿ ಸ್ವತ್ತು ಮಾರಾಟ ಆದ ಕೂಡಲೇ ಸದರಿ ಸಾಲವನ್ನು ತೀರುವಳಿ ಮಾಡಿರುತ್ತೇನೆ.

**ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

***(ಟಿ.ಶ್ರೀಕಾಂತ್)***
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**